# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 48, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)

# KITTURU RANI CHANNAMMA UNIVERSITY

*(Formerly known as 'Rani Channamma University, Belagavi')*

**Vidyasangama, National Highway – 48, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

ಕುಲಸಚಿವರ ಕಾರ್ಯಾಲಯ, ಬೆಳಗಾವಿ

E-mail: rti@rcub.ac.in
registrar@rcub.ac.in

ಕುಲಸಚಿವರ ಕಾರ್ಯಾಲಯ

**Office of the Registrar**

Website: www.rcub.ac.in
Phone No.: 0831-2565234


ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿದ್ಯಾಮಂಡಳ ವಿಭಾಗ/2026-27/4672 ದಿನಾಂಕ: 16 OCT 2026

## ಸುತ್ತೋಲೆ

**ವಿಷಯ:** ಸ್ನಾತಕ ಅಧ್ಯಯನ ವಿಭಾಗದಲ್ಲಿ Employability Skill ವಿಷಯದ ಪರೀಕ್ಷೆಗಳನ್ನು ನಡೆಸುವ ವಿಧಾನದ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 15.10.2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕ ವಿಭಾಗದ 2026-27 ನೇ ಶೈಕ್ಷಣಿಕ ಸಾಲಿನ 1 ನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಿಗೆ Employability Skill ವಿಷಯದ ಪರೀಕ್ಷೆಗಳನ್ನು E-Sparda App ನಲ್ಲಿ Online ಮುಖಾಂತರ ನಡೆಸಲಾಗುತ್ತಿದ್ದು, ಪರೀಕ್ಷಾ ವಿಧಾನದ ವಿವರಗಳು ಈ ಕೆಳಗಿನಂತಿವೆ.

1. Employability Skills ವಿಷಯದ ಪರೀಕ್ಷೆಯನ್ನು ಬಹು ಆಯ್ಕೆ ಪ್ರಶ್ನೆಗಳ (MCQ) ಮಾದರಿಯಲ್ಲಿ E-Spardha ಮೂಲಕ ಆನ್‌ಲೈನ್ ನಲ್ಲಿ ನಡೆಸಲಾಗುವುದು. . ಪ್ರತಿ ಸೆಮೆಸ್ಟರ್ ಪರೀಕ್ಷಾ ಪ್ರವೇಶ ಪತ್ರದಲ್ಲಿ (Hall Ticket) Employability Skills ವಿಷಯದ ಪರೀಕ್ಷೆಯ ದಿನಾಂಕ ಮತ್ತು ವಿವರಗಳನ್ನು ನಮೂದಿಸಲಾಗುವುದು. Employability Skills ವಿಷಯದ ಪರೀಕ್ಷೆಗೆ ಯಾವುದೇ ಪ್ರತ್ಯೇಕ ಪರೀಕ್ಷಾ ಶುಲ್ಕ ಇರುವುದಿಲ್ಲ.
2. ಪ್ರತಿ ಸೆಮೆಸ್ಟರ್‌ಗೆ 50 ಪ್ರಶ್ನೆಗಳನ್ನು, ಪ್ರತಿ ಪ್ರಶ್ನೆಗೆ 2 ಅಂಕಗಳಂತೆ ಒಟ್ಟು 100 ಅಂಕಗಳನ್ನು ನಿಗದಿಪಡಿಸಲಾಗಿದ್ದು ಪ್ರತಿ ತಪ್ಪು ಉತ್ತರಕ್ಕೆ 0.25 ಋಣಾತ್ಮಕ ಅಂಕ ನೀಡಲಾಗುವುದು.
3. ಪರೀಕ್ಷೆಯ ಅವಧಿಯನ್ನು 60 ನಿಮಿಷಗಳಿಗೆ ನಿಗದಿಪಡಿಸಲಾಗಿದ್ದು ಹಾಗೂ ವಿದ್ಯಾರ್ಥಿಗಳು ಅವರಿಗೆ ನಿಗದಿಪಡಿಸಲಾದ ಪರೀಕ್ಷಾ ಕೊಠಡಿ/ಸ್ಥಳದಲ್ಲಿಯೇ ಮೊಬೈಲ್ ಸಾಧನದ ಮೂಲಕ ಆನ್‌ಲೈನ್ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಅವಕಾಶ ಕಲ್ಪಿಸುವುದು. ವಿದ್ಯಾರ್ಥಿಗಳು ಮೊಬೈಲ್‌ಗಳನ್ನು ಹೊಂದಿರದೇ ಇದ್ದಲ್ಲಿ ಮಹಾವಿದ್ಯಾಲಯಗಳ ಕಂಪ್ಯೂಟರ್ ಲ್ಯಾಬ್‌ಗಳಲ್ಲಿ ಪರೀಕ್ಷೆ ಬರೆಯಲು ಅವಕಾಶವನ್ನು ಕಲ್ಪಿಸುವುದು. ವಿದ್ಯಾರ್ಥಿಯು ಪರೀಕ್ಷೆಯನ್ನು 1 ಘಂಟೆಯೊಳಗೆ ಪೂರ್ಣಗೊಳಿಸಿದಲ್ಲಿ E-Spardha ವ್ಯವಸ್ಥೆಯ ಮೂಲಕ ತಕ್ಷಣ ಪರೀಕ್ಷಾ ಸ್ವಯಂರಚಿತ (Auto Generated) ಫಲಿತಾಂಶ ಲಭ್ಯವಾಗುತ್ತದೆ . Employability Skills ವಿಷಯದಲ್ಲಿ 40%ಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಗರಿಷ್ಠ ಮೂರು ಅವಕಾಶಗಳನ್ನು ಅದೇ ದಿನ ಕಲ್ಪಿಸಲಾಗುತ್ತದೆ . ಅಂಕ ಸುಧಾರಣೆಗೆ ಯಾವುದೇ ಅವಕಾಶವಿರುವುದಿಲ್ಲ ಹಾಗೂ ಮೂರು ಅವಕಾಶಗಳಲ್ಲಿಯೂ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಂದಿನ ಸೆಮೆಸ್ಟರ್‌ಗಳಲ್ಲಿ ಮರುಪರೀಕ್ಷೆಗಳನ್ನು ನಡೆಸಲಾಗುವುದಿಲ್ಲ.
4. ವಿದ್ಯಾರ್ಥಿಯು 40% ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದರೆ "Completed" ಹಾಗೂ 40%ಕ್ಕಿಂತ ಕಡಿಮೆ ಅಂಕಗಳನ್ನು ಪಡೆದರೆ "Attempted" ಎಂದು ಪರಿಗಣಿಸಲಾಗುವುದು. Employability Skills ವಿಷಯಕ್ಕೆ ಪ್ರತಿ ಸೆಮೆಸ್ಟರ್‌ಗೆ 3 ಕ್ರೆಡಿಟ್‌ಗಳಂತೆ ಒಟ್ಟು 18 ಕ್ರೆಡಿಟ್‌ಗಳನ್ನು ನಿಗದಿಪಡಿಸಿ, ಪ್ರತಿಯೊಂದು ಸೆಮೆಸ್ಟರ್‌ಗಳ ಅಂಕಪಟ್ಟಿಯಲ್ಲಿ



ಮುಂದುವರೆಯುತ್ತದೆ........

ES-1 ರಿಂದ ES-6 ಎಂದು ನಮೂದಿಸಲಾಗುವುದು ಪ್ರತಿ ಸೆಮೆಸ್ಟರ್.ನ ಅಂಕಪಟ್ಟಿಯಲ್ಲಿ ಫಲಿತಾಂಶವನ್ನು Remarkನಲ್ಲಿ Completed/Attempted ಎಂದು ನಮೂದಿಸಲಾಗುವುದು. ಅಂತಿಮ ಸೆಮೆಸ್ಟರ್ ಅಂಕಪಟ್ಟಿಯಲ್ಲಿ ಆರು ಸೆಮೆಸ್ಟರ್.ಗಳ ಕ್ರೆಡಿಟ್.ಗಳನ್ನು ಒಟ್ಟುಗೂಡಿಸಿ ಒಟ್ಟು 18 ಕ್ರೆಡಿಟ್.ಗಳನ್ನು ;ನಮೂದಿಸಲಾಗುವುದು.. Employability Skills ವಿಷಯದ ಕ್ರೆಡಿಟ್.ಗಳನ್ನು SGPA ಮತ್ತು CGPA ಲೆಕ್ಕಾಚಾರದಲ್ಲಿ ಪರಿಗಣಿಸಲಾಗುವುದಿಲ್ಲ.

5. ಪ್ರತಿ ಸೆಮೆಸ್ಟರ್ ಗೆ ಎರಡು ತಯಾರಿ ಪರೀಕ್ಷೆಗಳನ್ನು (Mock Tests) E-Spardha App ಮೂಲಕ ನಡೆಸಲಾಗುವುದು. ಈ ಕುರಿತು ಸುತ್ತೋಲೆಯನ್ನು ಹೊರಡಿಸಲಾಗುವುದು.

ಮುಂದುವರೆದು, ಸದರಿ ವಿಷಯವನ್ನು ಮಹಾವಿದ್ಯಾಲಯಗಳ ಪ್ರಾಂಶುಪಾಲರು ಗಮನಿಸಿ Employability Skills ವಿಷಯದ ಪರೀಕ್ಷೆಗಳನ್ನು ನಡೆಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಸಂತೋಷ ಕಾಮಗೌಡ, ಕೆ.ಎ.ಎಸ್.
ಕುಲಸಚಿವರು
ಕುಲಸಚಿವರು
ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

ಇವರಿಗೆ,

1. ಪ್ರಾಂಶುಪಾಲರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ
2. ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ

**ಪ್ರತಿ ಮಾಹಿತಿಗಾಗಿ**:

1. ಕುಲಸಚಿವರು(ಮೌಲ್ಯಮಾಪನ), ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಹಣಕಾಸು ಅಧಿಕಾರಿಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3. ಡೀನರು, ಕಲಾ/ವಾಣಿಜ್ಯ/ಶಿಕ್ಷಣ/ವಿಜ್ಞಾನ & ತಂತ್ರಜ್ಞಾನ ನಿಖಾಯಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5. ನಿರ್ದೇಶಕರು, ಇ-ಸ್ಪರ್ದಾ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳ.ಗಾವಿ.
6. ಸಂಯೋಜಕರು, ಇ-ವಿದ್ಯಾ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
7. ರಕ್ಷಾ ಪ್ರತಿ.